**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಸಿ ಸಿ ನಂ. 729/2024**

**ಚಾ.ಸಾ.** 4

**ಪ್ರಾ.ಸಾ.** 2

**ದಿನಾಂಕಃ 08.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೊಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಶ್ರೀಧರ ಗುಗ್ಗರಿ |
| ತಂದೆಃ ಗಂಡನ ಹೆಸರು | ಅಪ್ಪಾಸಾಬ |
| ಉದ್ಯೋಗ | ಪಿ ಸಿ |
| ವಯಸ್ಸು | 33 ವರ್ಷ |
| ವಾಸಸ್ಥಳ | ಧಾರವಾಡ |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದ**

ದಿಃ 24.12.2023 ರಂದು ಸಾಯಂಕಾಲ 7.00 ಗಂಟೆಯ ಸುಮಾರಿಗೆ ಠಾಣೆಯಲ್ಲಿದ್ದಾಗ ನಾನು, ಚಾಸಾ-1 ಮತ್ತು 5 ನಮ್ಮನ್ನು ಕರೆದು ಒಂದು ಬಾತ್ಮಿ ಬಂದಿದ್ದು ಸದರಿ ಬಾತ್ಮಿಯಲ್ಲಿ ಗಳಗಿಹುಲಕೊಪ್ಪದಲ್ಲಿ ಗಾಂಧಿ ಸರ್ಕಲ್ ಮುಂದೆ ಒಬ್ಬ ವ್ಯಕ್ತಿಯು ತನ್ನ ಸ್ವಂತ ಲಾಭಗೋಸ್ಕರ ಒಂದು ಚೀಲದಲ್ಲಿ ಸಾರಾಯಿ ಮಾರಾಟ ಮಾಡುತ್ತಿದ್ದು ನೀವು ಹೋಗಿ ದಾಳಿ ಮಾಡಿಕೊಂಡು ಬನ್ನಿ ಎಂದು ಠಾಣಾ ಪಿ ಐ ರವರು ಚಾಸಾ-1 ರವರಿಗೆ ನಿರ್ದೇಶನ ನೀಡಿದ್ದು ಅದರಂತೆ ಚಾಸಾ-1 ರವರು ಚಾಸಾ-5 ಮತ್ತು ನನಗೆ ದಾಳಿ ಮಾಡಲು ಇಬ್ಬರು ಪಂಚರನ್ನು ಕರೆದುಕೊಂಡು ಬನ್ನಿ ಎಂದು ಹೇಳಿ ಕಳುಹಿಸಿದರು. ಅದರಂತೆ ನಾನು ಇಬ್ಬರು ಪಂಚರಾದ ಚಾಸಾ-2 ಮತ್ತು 3 ರವರನ್ನು ಕರೆದುಕೊಂಡು ಬಂದು ಚಾಸಾ-1 ರವರ ಮುಂದೆ ಹಾಜರುಪಡಿಸಿದೆನು. ಚಾಸಾ-1 ರವರು ಸದರಿಯವರಿಗೆ ತನ್ನ ಪರಿಚಯ ಮಾಡಿಕೊಂಡು ಬಾತ್ಮಿ ಬಂದ ವಿಷಯವನ್ನು ತಿಳಿಸಿ ದಾಳಿ ಮಾಡಿಕೊಂಡು ಬರಬೇಕೆಂದು ಕೇಳಿಕೊಂಡಾಗ ಸದರಿ ಪಂಚರು ಒಪ್ಪಿಕೊಂಡಿರುತ್ತಾರೆ. ಅದರಂತೆ ನಾವು ನಮ್ಮ ಸ್ವಂತ ದ್ವಿಚಕ್ರ ವಾಹನದಲ್ಲಿ ಕೃತ್ಯ ಸ್ಥಳಕ್ಕೆ ಹೋದೆವು. ಸದರಿ

ಸ್ಥಳಕ್ಕೆ ಹೋದಾಗ ಸಮಯ ರಾತ್ರಿ 8.00 ಗಂಟೆ ಆಗಿತ್ತು. ನಮ್ಮ ಬೈಕನ್ನು ಬಾತ್ಮಿ ಬಂದ ಸ್ಥಳದ ಹತ್ತಿರ ಒಂದು ಹೋಟೆಲ ಇದ್ದು ಅಲ್ಲಿ ನಾವು ಮರೆಯಾಗಿ ನಿಲ್ಲಿಸಿದೆವು. ನಂತರ ನಾವು ನೋಡುತ್ತಿದಾಗ ಒಬ್ಬ ವ್ಯಕ್ತಿಯು ಚೀಲದೊಳಗೆ ಕೈ ಹಾಕಿ ಟೆಟ್ರಾ ಪಾಕೇಟಗಳನ್ನು ಕೊಡುತ್ತಿರುವುದು ಕಂಡುಬಂತು. ಸುಮಾರು ರಾತ್ರಿ 8.15 ಗಂಟೆಗೆ ಪಂಚರಿಗೆ ತಿಳಿಸಿ ದಾಳಿ ಮಾಡಲು ವ್ಯಕ್ತಿಯ ಹತ್ತಿರ ಹೋದಾಗ ಅಲ್ಲಿ ಇದ್ದ ಸಾರ್ವಜನಿಕರು 2 ಟೆಟ್ರಾ ಪಾಕೇಟಗಳನ್ನು ಚಲ್ಲಿ ಓಡಿ ಹೋದರು. ನಂತರ ವ್ಯಕ್ತಿಯ ಹತ್ತಿರ ಇದ್ದ ಚೀಲವನ್ನು ತೆಗೆದು ನೆಲಕ್ಕೆ ಹಾಕಿ ಚೆಕ್ ಮಾಡಿ ನೋಡಲಾಗಿ ಚೆಲ್ಲಿದ 2 ಟೆಟ್ರಾ ಪಾಕೇಟಗಳನ್ನು ಸೇರಿಸಿ ಒಟ್ಟು 90 ಎಮ್ ಎಲ್ ನ ಓರಿಜಿನಲ್ ಚಾಯ್ಸ ವಿಸ್ಕಿಯ 170 ಟೆಟ್ರಾ ಪಾಕೇಟಗಳು ಇರುವುದು ಕಂಡು ಬಂದಿತು.

ಚಾಸಾ-1 ರವರು ಸದರಿ ವ್ಯಕ್ತಿಯ ಹೆಸರನ್ನು ಕೇಳಲಾಗಿ ದ್ಯಾಮನಗೌಡ ಬಸನಗೌಡ ಪಾಟೀಲ ಎಂದು ತಿಳಿಸಿದನು ಹಾಗೇ ಚೀಲದಲ್ಲಿದ್ದ ಟೆಟ್ರಾ ಪಾಕೇಟಗಳನ್ನು ಎಲ್ಲಿಂದ ತಂದಿರುವೆ ಮಾರಾಟ ಮಾಡಲು ಪರವಾನಿಗೆ ಇದೇಯೇ ಎಂದು ಕೇಳಲಾಗಿ ಸಮರ್ಪಕ ಉತ್ತರ ನೀಡಿರುವುದಿಲ್ಲ. ನಂತರ ದೊರೆತ ಮುದ್ದೆಮಾಲನ್ನು ಪಂಚರ ಸಮಕ್ಷಮ ಅದೇ ಗೊಬ್ಬರ ಚೀಲದಲ್ಲಿ ಹಾಕಿ ಪ್ಯಾಕ್ ಶೀಲ್ ಬಂದ ಮಾಡಿ ಪಂಚರ ಸಹಿ ಮತ್ತು ಚಾಸಾ-1 ರವರ ಸಹಿಯುಳ್ಳ ಚೀಟಿಯನ್ನು ಅಂಟಿಸಲಾಯಿತು. ಎಫ್ ಎಸ್ ಎಲ್ ಗೆ ಕಳುಹಿಸುವ ಸಂಬಂಧ ನಾನು ಸದರಿ ಮುದ್ದೆಮಾಲನ್ನು ಎಸ್ ಎಚ್ ಓರವರಿಗೆ ಒಪ್ಪಿಸಿದೆವು. ಆರೋಪಿ ಮತ್ತು ದೊರೆದ ಮುದ್ದೆಮಾಲನ್ನು ಠಾಣೆಗೆ ತಂದು ಎಸ್ ಎಚ್ ಓ ರವರಾದ ಚಾಸಾ-8 ರವರಿಗೆ ವರದಿಯನ್ನು ನೀಡಿದ್ದೇವು. ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲನ್ನು ನೋಡಿ ಸಾಕ್ಷಿಯು ಗುರುತಿಸಿದ್ದು ಅದನ್ನು ಈಗಾಗಲೇ ಮು ಮಾ 1 ನ್ನು ಗುರುತಿಸಲಾಗಿದೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಅಪಾದಿತನ ಪರ ಶ್ರೀ ಎ ಟಿ ಓ ವಕೀಲರಿಂದ**

ಈ ಪ್ರಕರಣದ ಬಾತ್ಮಿಯು ಚಾಸಾ-1 ರವರಿಗಾಗಲಿ ಮತ್ತು ನಿಮಗಾಗಲಿ ಬಂದಿದೆ ಎಂದರೆ ಸಾಕ್ಷಿಯು ಪಿ ಎಸ್ ಐರವರಿಗೆ ಬಂದಿದೆ ಎಂದು ನೀಡಿರುತ್ತಾರೆ. ನಿಪಿ1 ರಲ್ಲಿ ಸದರಿ ವಿಷಯು ನಮೂದು ಆಗಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಬಾತ್ಮಿ ಬಂದಾಗ ಸಮಯ ಸಾಯಂಕಾಲ 7.00 ಗಂಟೆ ಆಗಿತ್ತು. ನಾನು ಠಾಣೆಯನ್ನು ಬಿಟ್ಟಾಗ ಅದೇ ದಿನ ಸಮಯ ಸಾಯಂಕಾಲ

7.30 ಗಂಟೆ ಆಗಿತ್ತು. ಪಂಚರಾದ ಚಾಸಾ2 ಮತ್ತು 3 ರವರಿಗೆ ಠಾಣೆಗೆ ಕರೆದುಕೊಂಡು ಬಂದ ಪೂರ್ವದಲ್ಲಿ ಯಾವುದೇ ತಿಳುವಳಿಕೆ ಪತ್ರ ನೀಡಿರುವುದಿಲ್ಲ. ಸದರಿಯವರಿಗೆ ಬಾತ್ಮಿ ಬಂದ ವಿಷಯವನ್ನು ತಿಳಿಸಿ ಕರೆದುಕೊಂಡು ಬಂದೆ. ಠಾಣೆಯಲ್ಲಿ ಚಾಸಾ2 ಮತ್ತು 3 ರವರಿಗೆ ತಿಳುವಳಿಕೆ ಪತ್ರ ನೀಡಿದ್ದಿರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಈ ಪ್ರಕರಣದ ದಾಳಿಗೆ ಹೋಗುವ ಪೂರ್ವದಲ್ಲಿ ಠಾಣಾ ಕಚ್ಚಾ ಡೇರಿಯಲ್ಲಿ ನಮೂದು ಮಾಡಿ ಹೋದೆವು. ಸದರಿ ಡೇರಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಗುನ್ನಾ ಸ್ಥಳವು ಕಲಘಟಗಿ ಗ್ರಾಮದ ಎ ಗ್ರೇಡ್ ಊರಲ್ಲಿ ಇದೆ ಎಂದರೆ ಸರಿ. ಠಾಣೆಯಿಂದ ಗುನ್ನಾ ಸ್ಥಳವು ಸುಮಾರು 18-20 ಕಿ.ಮೀ ಅಂತರದಲ್ಲಿದೆ. ಠಾಣೆಯಲ್ಲಿ ಗುನ್ನಾ ಸ್ಥಳ ಇರುವ ಊರು ಸುಮಾರು 30 ಕಿ.ಮೀ ಇದೆ ಎಂದು ನಮೂದು ಮಾಡಿ ಚಾರ್ಟ ಇದೆ ಎಂದರೆ ಸರಿಯಲ್ಲ.

ದಾಳಿ ಮಾಡಲು ಹೋದಾಗ ನಾನು ಸಮವಸ್ತ್ರದಲ್ಲಿ ಇರಲಿಲ್ಲ. ಚಾಸಾ-1 ರವರು ತನ್ನ ಸಮವಸ್ತ್ರದಲ್ಲಿ ಇದ್ದರು. ಸ್ಥಳಕ್ಕೆ ಎಷ್ಟು ದ್ವಿಚಕ್ರದಲ್ಲಿ ಹೋದರು ಎಂದರೆ ಸಾಕ್ಷಿಯು ಸ್ವಲ್ಪ ಹೊತ್ತು ವಿಚಾರ ಮಾಡಿ ನಂತರ ಸುಮಾರು 3 ದ್ವಿಚಕ್ರ ವಾಹನ ಇದ್ದಲ್ಲಿ ಹೋದೆವು ಎಂದು ನುಡಿದಿರುತ್ತಾರೆ. ಚಾಸಾ-2 ಮತ್ತು 3 ರವರನ್ನು ಅವರದೇ ಆದ ದ್ವಿಚಕ್ರ ವಾಹನದಲ್ಲಿ ಸ್ಥಳಕ್ಕೆ ಕರೆದುಕೊಂಡು ಹೋದೆವು. ಸದರಿ ರವರ ದ್ವಿಚಕ್ರ ವಾಹನದ ಸಂಖ್ಯೆ ಮತ್ತು ಕಂಪನಿಯ ಹೆಸರು ಹೇಳಲು ಬರುವುದೇ ಎಂದರೆ ಸಾಕ್ಷಿಯು ಮೊದಲಿಗೆ ಗೊತ್ತಿಲ್ಲ ಎಂದು ನುಡಿದು ನಂತರ ನೆನಪಿಲ್ಲ ಎಂದು ನುಡಿದಿರುತ್ತಾರೆ. ಸದರಿ ಊರಿನಲ್ಲಿ 3-4 ಸರ್ಕಲ್ ಗಳು ಇದೆ ಎಂದರೆ ಸರಿ. ಗಳಗಿಹುಲಕೊಪ್ಪ ಗ್ರಾಮದಲ್ಲಿರುವ ಗಾಂಧಿ ಸರ್ಕಲ್ ಒಂದು ದೊಡ್ಡ ಸರ್ಕಲ್ ಎಂದರೆ ಸಾಕ್ಷಿಯು ಸಣ್ಣ ಸರ್ಕಲ್ ಎಂದು ನುಡಿಯುತ್ತಾರೆ. ಗಾಂಧಿ ಸರ್ಕಲ್ ನಿಂದ ಉಡುಪಿ ಹೋಟೇಲ್ ಸುಮಾರು 10-15 ಅಡಿ ಇದೆ ಎಂದು ನುಡಿಯುತ್ತಾರೆ. ಗಾಂಧಿ ಸರ್ಕಲ್ ನಿಂದ ಉಡುಪಿ ಹೋಟೆಲ್ ಗೆ ಸುಮಾರು 100 ಅಡಿ ಅಂತರ ಇದೆ ಎಂದರೆ ಸರಿಯಲ್ಲ. ಸದರಿ ಸರ್ಕಲ್ ಜನ ಸಂದನಿ ಇರುವ ಪ್ರದೇಶ ಇರುವ ಕಾರಣ ಸುಮಾರು ಜನರು ರಾತ್ರಿ 8.00 ಗಂಟೆಗೆ ಓಡಾಡುತ್ತಿದ್ದರು ಎಂದರೆ ಸರಿ. ಆ ಸಮಯ ಬೀದಿ ದೀಪಗಳು ಹಚ್ಚಿರುತ್ತಾರೆ ಎಂದರೆ ಸರಿ.

ಚಾಸಾ-1 ರವರು ಕಲಘಟಗಿ ತಾಲೂಕಾ ಪಿ ಎಸ್ ಐ ಇದ್ದ ಕಾರಣ ತಾಲೂಕಾ ಇದ್ದ ಜನರು ಅವರಿಗೆ ಪರಿಚಯ ಇದ್ದರು ಎಂದರೆ ಸರಿ. ಚಾಸಾ-5 ರವರು ಗಳಿಗೆಹುಲಕೊಪ್ಪ ಗ್ರಾಮದಲ್ಲಿ ಬಿಟ್ಸ ಮಾಡಿರುವ ಕಾರಣ ಅವರಿಗೂ ಪರಿಚಯ ಇದ್ದರು ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ನನಗೆ ಗಳಿಗೆಹುಲಕೊಪ್ಪ ಗ್ರಾಮ ಗ್ರಾಮಸ್ಥರು ಪರಿಚಯ ಇದ್ದಾರೆ. ನಾವು ದಾಳಿ ಮಾಡಲು ಹೋದಾಗ ಗ್ರಾಮದ ಸ್ಥಳೀಯರು ನಮ್ಮನ್ನು ಮಾತಾಡಿಸಿಲ್ಲ. ಸ್ಥಳದಲ್ಲಿ ವ್ಯಕ್ತಿಯು ಚೀಲದಲ್ಲಿ ಟೆಟ್ರಾ ಪಾಕೇಟಗಳನ್ನು ಮಾರಾಟ ಮಾಡುತ್ತಿದ್ದು ಸುಳ್ಳು ಎಂದರೆ ಸರಿಯಲ್ಲ. ಸುಮಾರು ರಾತ್ರಿ 8.15 ಗಂಟೆಗೆ ಪಂಚರಿಗೆ ತಿಳಿಸಿ ದಾಳಿ ಮಾಡಲು ವ್ಯಕ್ತಿಯ ಹತ್ತಿರ ಹೋದಾಗ ಅಲ್ಲಿ ಇದ್ದ ಸಾರ್ವಜನಿಕರು 2 ಟೆಟ್ರಾ ಪಾಕೇಟಗಳನ್ನು ಚಲ್ಲಿ ಓಡಿ ಹೋದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚೀಲದ ಕಂಪನಿಯ ಹೆಸರು ನಿಪಿ1 ರಲ್ಲಿ ನಮೂದು ಮಾಡಿಲ್ಲ.

ಆರೋಪಿಯ ಪರ ವಕೀಲರ ಕೋರಿಕೆಯ ಮೇರೆಗೆ ಮು ಮಾ 1 ರಲ್ಲಿರುವ ಮುದ್ದೆಮಾಲುಗಳನ್ನು ತೆರೆದ ನ್ಯಾಯಾಲಯದಲ್ಲಿ ಎಣಿಸಿ ನೋಡಲಾಯಿತು. ಸದರಿ ಚೀಲದಲ್ಲಿರುವ ಟೆಟ್ರಾ ಪಾಕೇಟಗಳು 120 ಇರುವುದು ಕಂಡುಬಂದಿತು. ಪಂಚರ ಸಮಕ್ಷಮ ಸದರಿ ಮುದ್ದೆಮಾಲನ್ನು ಶೀಲು ಮಾಡಿ ಚೀಟಿಯನ್ನು ಅಂಟಿಸಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಯಾವುದೇ ರೀತಿಯ ಸತ್ಯ ಸಂಗತಿಗಳು ಇಲ್ಲದಿದ್ದರೂ ಸಹ ಆರೋಪಿಯ ವಿರುದ್ಧ ಸೃಷ್ಟಿ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆಮಾಲಿಗೂ ಆರೋಪಿಗೂ ಯಾವುದೇ ರೀತಿಯ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ನನ್ನ ಮೇಲಾಧಿಕಾರಿಯಾದ ಕಾರಣ ನಾನು ಈ ಪ್ರಕರಣದ ಪಿರ್ಯಾದಿಗೆ ಅನುಗುಣವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಂಕಿ ಸಂಖ್ಯೆಗಾಗಿ ಅಪಾದಿತರ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**